# <u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ಹಾಗೂ ವಿಶೇಷ ನ್ಯಾಯಾಧೀಶರ ನ್ಯಾಯಾಲಯ, ಹಾವೇರಿ.</u>

## <u>ಪ್ರಕರಣ ಸಂಖ್ಯೆಃ ಸ್ಪೆಷಲ್ ಎಸ್.ವಿ.ಸಿ 04/2018</u>

ಅಸಾ ಃ**07**
ಚಾಸಾ ಃ15

| | | |
|---|---|---|
| ಸಾಕ್ಷಿದಾರರ ಹೆಸರುಃ | | ಎಚ್. ಕೊಟ್ರೇಶ |
| ತಂದೆಯ ಹೆಸರು | ಃ | ಎಚ್. ಪರಶುರಾಮಪ್ಪ |
| ವಯಸ್ಸು | ಃ | 54 ವರ್ಷ |
| ಉದ್ಯೋಗ | ಃ | ಸಹಾಯಕ ರಾಸಾಯನಿಕ ಪರೀಕ್ಷಕರು, ಪ್ರಾದೇಶಿಕ ರಾಸಾಯನಿಕ ಪರೀಕ್ಷಕರ ಪ್ರಯೋಗಾಲಯ, ಧಾರವಾಡ. |
| ವಾಸ ಸ್ಥಳ | ಃ | ಧಾರವಾಡ |

ದಿನಾಂಕಃ **04/09/2025** ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯಪ್ರತಿಜ್ಞೆ ಬೋಧಿಸಲಾಯಿತು.

## <u>ಮುಖ್ಯ ವಿಚಾರಣೆ ಮಾನ್ಯ ವಿಶೇಷ ಸಾರ್ವಜನಿಕ ಅಭಿಯೋಜಕರಿಂದಃ –</u>

1. ನವೆಂಬರ-2009 ರಿಂದ ನಾನು ಧಾರವಾಡದಲ್ಲಿ, ಪ್ರಾದೇಶಿಕ ರಾಸಾಯನಿಕ ಪರೀಕ್ಷಕರ ಪ್ರಯೋಗಾಲಯದಲ್ಲಿ ರಾಸಾಯನಿಕ ಪರೀಕ್ಷಕನಾಗಿ ಕೆಲಸ ನಿರ್ವಹಿಸುತ್ತಿದ್ದೇನೆ.

2. ದಿನಾಂಕ 28/08/2017 ರಂದು ದಾವಣಗೆರೆಯ ಎಸಿಬಿ ಎಸ್.ಪಿ.ರವರು ಈ ಕೇಸಿನ 11 ವಸ್ತುಗಳನ್ನು ಸೀಲ್ಡ ಕವರನಲ್ಲಿ ನಮ್ಮ ಕಾರ್ಯಾಲಯಕ್ಕೆ ಕಳಿಸಿದ್ದರು. ದಿನಾಂಕಃ16/10/2017 ರಂದು ನಾನು ಸದರಿ ವಸ್ತುಗಳನ್ನು ಪಡೆದು ಪರಿಶೀಲಿಸಿ ಪ್ರಮಾಣ ಪತ್ರ ನೀಡಿದ್ದೇನೆ. ನಾನು ನೀಡಿದ ಪ್ರಮಾಣ ಪತ್ರವನ್ನು ಈಗ ನಿಪಿ-39, ನನ್ನ ಸಹಿಯನ್ನು ನಿಪಿ-39(ಎ) ಎಂದು ಗುರುತಿಸಲಾಯಿತು. ಪೊಲೀಸರು ಕಳಿಸಿಕೊಟ್ಟ ವಸ್ತುಗಳ ಮೇಲೆ ಕ್ರಮ ಸಂಖ್ಯೆ ಬರೆಯಲಾಗಿತ್ತು. ನಾನು ಅವುಗಳನ್ನು ಕ್ರಮ ಸಂಖ್ಯೆ 1 ರಿಂದ 11 ಎಂದು ಗುರುತಿಸಿದೆ.

3. ನಾನು ಗುರುತಿಸಿದ ಕ್ರಮ ಸಂಖ್ಯೆ-1 ರ ಬಣ್ಣರಹಿತ ದ್ರಾವಣವನ್ನು ಪರೀಕ್ಷಿಸಿದಾಗ ಸೋಡಿಯಂ ಕಾರ್ಬೋನೇಟ್ ಮಾತ್ರ ಇದ್ದು, ಪಿನಾಫ್ತಲಿನ್ ಇರುವುದು ಕಂಡುಬರಲಿಲ್ಲ. ನಾನು ಗುರುತಿಸಿದ ಕ್ರಮ ಸಂಖ್ಯೆ-2 ರ ಗುಲಾಬಿ ಬಣ್ಣದ ದ್ರಾವಣವನ್ನು ಪರೀಕ್ಷಿಸಿದಾಗ ಸೋಡಿಯಂ ಕಾರ್ಬೋನೇಟ್ ಮತ್ತು ಪಿನಾಫ್ತಲಿನ್ ಇದ್ದುದು ಕಂಡುಬಂತು. ನಾನು ಗುರುತಿಸಿದ ಕ್ರಮ ಸಂಖ್ಯೆ-3 ರ

ಬಣ್ಣರಹಿತ ದ್ರಾವಣವನ್ನು ಪರೀಕ್ಷಿಸಿದಾಗ ಸೋಡಿಯಂ ಕಾರ್ಬೋನೇಟ್ ಮಾತ್ರ ಇದ್ದು, ಪಿನಾಫ್ತಲಿನ್ ಇರುವುದು ಕಂಡುಬರಲಿಲ್ಲ. ನಾನು ಗುರುತಿಸಿದ ಕ್ರಮ ಸಂಖ್ಯೆ-4ರ ಬಣ್ಣರಹಿತ ದ್ರಾವಣವನ್ನು ಪರೀಕ್ಷಿಸಿದಾಗ ಸೋಡಿಯಂ ಕಾರ್ಬೋನೇಟ್ ಮಾತ್ರ ಇದ್ದು, ಪಿನಾಫ್ತಲಿನ್ ಇರುವುದು ಕಂಡುಬರಲಿಲ್ಲ. ನಾನು ಗುರುತಿಸಿದ ಕ್ರಮ ಸಂಖ್ಯೆ-5ರ ಬಣ್ಣರಹಿತ ದ್ರಾವಣವನ್ನು ಪರೀಕ್ಷಿಸಿದಾಗ ಸೋಡಿಯಂ ಕಾರ್ಬೋನೇಟ್ ಮಾತ್ರ ಇದ್ದು, ಪಿನಾಫ್ತಲಿನ್ ಇರುವುದು ಕಂಡುಬರಲಿಲ್ಲ. ನಾನು ಗುರುತಿಸಿದ ಕ್ರಮ ಸಂಖ್ಯೆ-6ರ ಕವರನಲ್ಲಿದ್ದ ನೋಟುಗಳನ್ನು ಪರೀಕ್ಷಿಸಿದಾಗ ಪಿನಾಫ್ತಲಿನ್ ಮಾತ್ರ ಇದ್ದು, ಸೋಡಿಯಂ ಕಾರ್ಬೋನೇಟ್ ಇರುವುದು ಕಂಡುಬರಲಿಲ್ಲ. ನಾನು ಗುರುತಿಸಿದ ಕ್ರಮ ಸಂಖ್ಯೆ-7ರ ಬಣ್ಣರಹಿತ ದ್ರಾವಣವನ್ನು ಪರೀಕ್ಷಿಸಿದಾಗ ಸೋಡಿಯಂ ಕಾರ್ಬೋನೇಟ್ ಮಾತ್ರ ಇದ್ದು, ಪಿನಾಫ್ತಲಿನ್ ಇರುವುದು ಕಂಡುಬರಲಿಲ್ಲ. ನಾನು ಗುರುತಿಸಿದ ಕ್ರಮ ಸಂಖ್ಯೆ-8ರ ಕವರನಲ್ಲಿದ್ದ ಹತ್ತಿ ತುಂಡನ್ನು ಪರೀಕ್ಷಿಸಿದಾಗ ಪಿನಾಫ್ತಲಿನ್ ಮತ್ತು ಸೋಡಿಯಂ ಕಾರ್ಬೋನೇಟ್ ಇರುವುದು ಕಂಡುಬರಲಿಲ್ಲ.

4. ನಾನು ಗುರುತಿಸಿದ ಕ್ರಮ ಸಂಖ್ಯೆ-9ರ ಕವರನಲ್ಲಿದ್ದ ಹತ್ತಿ ತುಂಡನ್ನು ಪರೀಕ್ಷಿಸಿದಾಗ ಪಿನಾಫ್ತಲಿನ್ ಮತ್ತು ಸೋಡಿಯಂ ಕಾರ್ಬೋನೇಟ್ ಎರಡೂ ಇರುವುದು ಕಂಡುಬಂತು. ನಾನು ಗುರುತಿಸಿದ ಕ್ರಮ ಸಂಖ್ಯೆ-10ರ ಕವರನಲ್ಲಿದ್ದ ಹತ್ತಿ ತುಂಡನ್ನು ಪರೀಕ್ಷಿಸಿದಾಗ ಪಿನಾಫ್ತಲಿನ್ ಮಾತ್ರ ಇದ್ದು, ಸೋಡಿಯಂ ಕಾರ್ಬೋನೇಟ್ ಇರುವುದು ಕಂಡುಬರಲಿಲ್ಲ. ನಾನು ಗುರುತಿಸಿದ ಕ್ರಮ ಸಂಖ್ಯೆ-11ರ ಕವರನಲ್ಲಿದ್ದ ಪ್ಲಾಸ್ಟಿಕ್ ಕ್ಯಾರಿಬ್ಯಾಗನ್ನು ಪರೀಕ್ಷಿಸಿದಾಗ ಪಿನಾಫ್ತಲಿನ್ ಮಾತ್ರ ಇದ್ದು ಮತ್ತು ಸೋಡಿಯಂ ಕಾರ್ಬೋನೇಟ್ ಇರುವುದು ಕಂಡುಬರಲಿಲ್ಲ.

5. ನಾನು ಗುರುತಿಸಿದ ಕ್ರಮ ಸಂಖ್ಯೆ-2 ಮತ್ತು 9ರಲ್ಲಿ ಪಿನಾಫ್ತಲಿನ್ ಮತ್ತು ಸೋಡಿಯಂ ಕಾರ್ಬೋನೇಟ್ ಎರಡೂ ಇರುವುದು ಕಂಡುಬಂತು. ನಾನು ಗುರುತಿಸಿದ ಕ್ರಮ ಸಂಖ್ಯೆ-6, 10 ಮತ್ತು 11ರಲ್ಲಿ ಪಿನಾಫ್ತಲಿನ್ ಮಾತ್ರ ಕಂಡುಬಂತು. ನಾನು ಗುರುತಿಸಿದ ಕ್ರಮ ಸಂಖ್ಯೆ-1, 3 ರಿಂದ 5 ಮತ್ತು 7ರಲ್ಲಿ ಸೋಡಿಯಂ ಕಾರ್ಬೋನೇಟ್ ಮಾತ್ರ ಕಂಡುಬಂತು. ನಾನು ಗುರುತಿಸಿದ ಕ್ರಮ ಸಂಖ್ಯೆ-8ರಲ್ಲಿ ಪಿನಾಫ್ತಲಿನ್ ಅಥವಾ ಸೋಡಿಯಂ ಕಾರ್ಬೋನೇಟ್ ಕಂಡುಬರಲಿಲ್ಲ.

6. ಇನವಾಯ್ಸನಲ್ಲಿ ನಮೂದು ಮಾಡಿದ ವಿವರ ಮತ್ತು ನಾನು ಪರೀಕ್ಷಿಸಿದ ವಸ್ತುಗಳ ವಿವರ ಪರಸ್ಪರ ಹೊಂದುತ್ತಿದ್ದು, ಕವರುಗಳ ಮೇಲಿದ್ದ ಸೀಲುಗಳು ಸುಸ್ಥಿತಿಯಲ್ಲಿದ್ದು ಮತ್ತು ಕವರುಗಳನ್ನು ನಾನೇ ತೆರೆದಿದ್ದೇನೆ. ಆರೋಪಿಯ ಎಡ ಮತ್ತು ಬಲಗೈ ತೊಳೆದ ದ್ರಾವಣದಲ್ಲಿ ಪಿನಾಫ್ತಲಿನ್ ಕಂಡುಬಂದಿಲ್ಲ ಆದರೆ ಕ್ರಮ ಸಂಖ್ಯೆ 6, 10 ಮತ್ತು 11ರಲ್ಲಿ ಕಂಡುಬಂತು. ವಸ್ತುಗಳನ್ನು ಪುನಃ ಸೀಲು ಮಾಡಿ ಪೊಲೀಸರಿಗೆ ಕಳಿಸಿದೆ.

**ಪಾಟೀ ಸವಾಲು ಆರೋಪಿ ಪರ ಶ್ರೀ ಯು.ಎನ್.ಜಿ. ವಕೀಲರಿಂದಃ-**

7. ಮನವಿ ಪತ್ರದೊಂದಿಗೆ ಪೊಲೀಸರು ವಹಿಸುವಿಕೆ ಮತ್ತು ದಾಳಿ ಪಂಚನಾಮೆಗಳ ಪ್ರತಿಗಳನ್ನು ನಮಗೆ ಕಳಿಸಿದ್ದರು ಎನ್ನುವುದು ನಿಜ. ಪಂಚನಾಮೆಗಳಲ್ಲಿ ವಸ್ತುಗಳ ಬಣ್ಣ ಕುರಿತು

ಬರೆದಿರುತ್ತಾರೆ ಎನ್ನುವುದು ನಿಜ. ಮನವಿ ಪತ್ರದಲ್ಲಿಯೂ ಸಹ ವಸ್ತುಗಳ ವಿವರ ಬರೆದಿರುತ್ತಾರೆ ಎನ್ನುವುದು ನಿಜ. ಯಾವ ದಿನಾಂಕದಂದು ವಸ್ತುಗಳನ್ನು ಪರೀಕ್ಷಿಸಿದೆ ಎಂದು ನಿಪಿ-39 ರಲ್ಲಿ ಬರೆದಿಲ್ಲ ಎಂದರೆ ಬಲಮೇಲ್ಭಾಗದಲ್ಲಿ ದಿನಾಂಕ ನಮೂದು ಮಾಡಿದ್ದೇನೆ. ವಸ್ತುಗಳನ್ನು ದಿನಾಂಕಃ16/10/2017 ರಂದು ಪರೀಕ್ಷಿಸಲಾಯಿತು ಎಂದು ನಿರ್ದಿಷ್ಟವಾಗಿ ನಮೂದು ಮಾಡಿಲ್ಲ ಎನ್ನುವುದು ನಿಜ.

8. ಯಾವ ವಸ್ತುವಿನಲ್ಲಿ ಎಷ್ಟು ಪ್ರಮಾಣದ ಸೋಡಿಯಂ ಕಾರ್ಬೊನೇಟ್ ಮತ್ತು ಪಿನಾಫ್ತಲಿನ್ ಕಂಡುಬಂತು ಎನ್ನುವುದು ನಮೂದು ಮಾಡಿಲ್ಲ ಎನ್ನುವುದು ನಿಜ. ಸಾಕ್ಷಿ ಸ್ವಇಚ್ಛೆಯಿಂದ ಹೇಳುತ್ತಾರೆ ಹಾಗೆ ನಮೂದು ಮಾಡುವ ಅವಶ್ಯಕತೆ ಇರಲಿಲ್ಲ. ಪೊಲೀಸರು ಕಳಿಸಿದ ವಹಿಸುವಿಕೆ ಮತ್ತು ಟ್ರ್ಯಾಪ್ ಪಂಚನಾಮೆ ಆಧರಿಸಿ ವರದಿ ಕೊಟ್ಟಿದ್ದೇನೆ ಎನ್ನುವುದು ಸುಳ್ಳು.

9. ನಾನು ವಸ್ತುಗಳನ್ನು ಪರೀಕ್ಷಿಸಿರುವ ಕುರಿತು ನಮ್ಮ ಕಾರ್ಯಾಲಯದ ರಜಿಸ್ಟರನಲ್ಲಿ ನಮೂದು ಮಾಡಿದ್ದೇನೆ. ಸದರಿ ಪುಸ್ತಕವನ್ನು ಈ ದಿನ ತಂದಿಲ್ಲ. ನಾನು ಈ ಮೇಲೆ ಹೇಳಿದ ಯಾವುದೇ ವಸ್ತುಗಳನ್ನು ಪರೀಕ್ಷಿಸಿಲ್ಲ ಎನ್ನುವುದು ಸುಳ್ಳು.

**ಮರುವಿಚಾರಣೆಃ** ಇಲ್ಲ.

*(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)*

ಓ ಹೇ ಕೇ ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಹಾಗೂ ವಿಶೇಷ ನ್ಯಾಯಾಧೀಶರು, ಹಾವೇರಿ.